# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 680 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 21.02.2023 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯಾವ ಕೈಗಾರಿಕೆಗಳನ್ನು ಗುಡಿ ಕೈಗಾರಿಕೆ ಎಂದು ಗುರುತಿಸಲಾಗಿದೆ; (ಈ ಬಗ್ಗೆ ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಮ್ಮಾರಿಕೆ, ಬುಟ್ಟಿ ಹೆಣೆಯುವವರು, ಗೋಲ್ಡ್ ಸ್ಮಿತ್ (ಆಭರಣ ತಯಾರಿಕೆ), ಶ್ರೀಗಂಧದ ಕ್ರಾಫ್ಟ್ಸ್, ಮೈಸೂರು ರೋಸ್‌ವುಡ್ ಕೆತ್ತನೆ, ಚನ್ನಪಟ್ಟಣ ಮರುಗು ಆಟಿಕೆಗಳು, ಬಿದ್ರಿವೇರ್, ಕಿನ್ನಾಳ ಆಟಿಕೆಗಳು, ನವಲಗುಂದ ರತ್ನಗಂಬಳಿಗಳು, ಮುಂಡಗೋಡ್ ಫೈಲ್ ಕಾರ್ಪೆಟ್‌ಗಳು, ಕಲ್ಲಿನ ಕೆತ್ತನೆ, ಮರದ ಕೆತ್ತನೆಗಳು, ಮೈಸೂರು ಸಾಂಪ್ರದಾಯಿಕ ಚಿತ್ರ ಕಲೆ, ಗಂಜಿಫಾ ಕಲೆ, ಕುಂಬಾರಿಕೆ / ಟೆರಾಕೋಟ / ಮಣ್ಣಿನ ವಿಗ್ರಹ ತಯಾರಿಕೆ, ಲೋಹದ ಕರಕುಶಲ, ಬೆತ್ತ ಮತ್ತು ಬಿದಿರು, ಸಂಡೂರು ಲಂಬಾಣಿ ಕಸೂತಿ, ಕಸೂತಿ ಕಲೆ, ಕೋಕೊನಟ್ ಶೆಲ್ ಕ್ರಾಫ್ಟ್ಸ್, ಕಂಬಳಿ ನೇಯುವವರು, ಚಾಪೆ ಹೆಣೆಯುವುದು, ನೇಕಾರರು, ಚಮ್ಮಾರರು ಎಂಬ ಗುಡಿ ಕೈಗಾರಿಕೆಗಳಿರುತ್ತವೆ. |
| ಆ) | ರಾಜ್ಯದಲ್ಲಿ ಸಾಂಪ್ರದಾಯಿಕವಾಗಿರುವ ಗುಡಿ ಕೈಗಾರಿಕೆಗಳು ಯಾವುವು ಮತ್ತು ಅವುಗಳನ್ನು ಯಾವ ಜಿಲ್ಲೆಗಳಲ್ಲಿ ಪ್ರಾಥಮಿಕವಾಗಿ ಉತ್ಪಾದಿಸಲಾಗುತ್ತಿವೆ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸಾಂಪ್ರಾದಾಯಿಕವಾಗಿರುವ ಗುಡಿ ಕೈಗಾರಿಕೆಗಳು ಮೇಲಿನಂತಿದ್ದು, ಭೌಗೋಳಿಕ ಗುರುತುಗಳುಳ್ಳ ಸಾಂಪ್ರಾದಾಯಿಕವಾಗಿರುವ ಗುಡಿ ಕೈಗಾರಿಕೆಗಳು ಈ ಕೆಳಕಂಡಂತಿದೆ.<br>1) ಚನ್ನಪಟ್ಟಣ ಗೊಂಬೆಗಳು - ರಾಮನಗರ.<br>2) ಬಿದರಿ ಕಲಾಕೃತಿಗಳು - ಬೀದರ್.<br>3) ಸಂಡೂರು ಲಂಬಾಣಿ ಕಸೂತಿ - ಬಳ್ಳಾರಿ.<br>4) ಮೈಸೂರಿನ ಬೀಟೆ ಮರದ ಕಲಾಕೃತಿಗಳು - ಮೈಸೂರು.<br>5) ಇಳ್ಕಲ್ ಸ್ಯಾರೀಸ್ - ಬಾಗಲಕೋಟೆ.<br>6) ಮೊಳಕಾಲೂರ್ ಸ್ಯಾರೀಸ್ - ಚಿತ್ರದುರ್ಗ.<br>7) ನವಲಗುಂದದ ಜಮಖಾನ - ಧಾರವಾಡ.<br>8) ಉಡುಪಿ ಸ್ಯಾರೀಸ್ - ಉಡುಪಿ.<br>9) ಕಿನ್ನಾಳ ಗೊಂಬೆಗಳು - ಕೊಪ್ಪಳ. |
| ಇ) | ರಾಜ್ಯದಲ್ಲಿರುವ ಗುಡಿ ಕೈಗಾರಿಕೆ / ಸಾಂಪ್ರದಾಯಿಕ ಕೈಗಾರಿಕೆಳ ಉತ್ತೇಜನಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆಯುತ್ತಿರುವ ಪ್ರೋತ್ಸಾಹಗಳು ಯಾವುವು; (ಕಳೆದ 3 ವರ್ಷಗಳ ಪ್ರೋತ್ಸಾಹಗಳನ್ನು | 1) ರಾಜ್ಯ ಸರ್ಕಾರವು ಕುಶಲಕರ್ಮಿಗಳಿಗೆ ಸಾಲ - ಸಹಾಯಧನ ಎಂಬ ಹೊಸ ಯೋಜನೆಯನ್ನು 2022-23ನೇ ಸಾಲಿನಲ್ಲಿ ಜಾರಿಗೆ ತಂದಿದ್ದು, ಈ ಯೋಜನೆಯಡಿ ಕುಶಲಕರ್ಮಿಗಳಿಗೆ ಬ್ಯಾಂಕಿನಿಂದ ರೂ.50,000/- ಸಾಲ ಹಾಗೂ ಶೇ.30 ರಷ್ಟು ಗರಿಷ್ಟ ರೂ.15,000/- ಗಳ ಸಹಾಯಧನ ನೀಡಲಾಗುವುದು. |

ಒಳಗೊಂಡಂತೆ ಪೂರ್ಣ ಮಾಹಿತಿ ನೀಡುವುದು)

2) ಪಿ.ಎಂ.ಇ.ಜಿ.ಪಿ. ಯೋಜನೆಯಡಿ ಮಾರ್ಗಸೂಚಿ ಪ್ರಕಾರ ಸಾಲ ಮತ್ತು ಸಹಾಯಧನ ಉತ್ಪಾದನಾ ಚಟುವಟಿಕೆಗೆ ಗರಿಷ್ಠ ಮಿತಿ ರೂ.50.00 ಲಕ್ಷ ಹಾಗೂ ಸೇವಾ ಚಟುವಟಿಕೆಗೆ ಗರಿಷ್ಠ ಮಿತಿ ರೂ.20.00 ಲಕ್ಷಗಳವರೆಗೆ ಬ್ಯಾಂಕ್ ಮುಖಾಂತರ ಆರ್ಥಿಕ ಹಾಗೂ ನಿಯಮಾನುಸಾರ ಸಹಾಯಧನವನ್ನು ನೀಡಲಾಗುವುದು.

3) ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಕಸುಬುದಾರರಿಗೆ ಕೆಳಕಂಡಂತೆ ರಿಯಾಯಿತಿ ಮತ್ತು ಪ್ರೋತ್ಸಾಹವನ್ನು ನೀಡಲಾಗುತ್ತಿದೆ:

a) ಬಿದರಿ ಕಲಾ ಸಂಕೀರ್ಣ, ಬೀದರ್‌ನ ನೋಂದಾಯಿತ ಕರಕುಶಲಕರ್ಮಿಗಳಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಬೆಳ್ಳಿ ಮತ್ತು ಸತು ವಿತರಣೆ.

b) ಅಲ್ಪಪರಿಚಿತ ವಸ್ತುಗಳ ಮಾರಾಟದ ಮೇಲೆ ಶೇ.20 ರಷ್ಟು ರಿಯಾಯಿತಿಯನ್ನು ನೀಡುವುದು.

c) ನೋಂದಾಯಿತ ಶ್ರೀಗಂಧ ಕರಕುಶಲಕರ್ಮಿಗಳಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ಶ್ರೀಗಂಧವನ್ನು ವಿತರಿಸುವುದು.

d) ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು ಶಿವಮೊಗ್ಗ ಜಿಲ್ಲೆಯ, ಸಾಗರದ ಶಿಲ್ಪಗುರುಕುಲದಲ್ಲಿ ವಿದ್ಯಾರ್ಥಿಗಳಿಗೆ ಕಲ್ಲು ಮತ್ತು ಮರದ ಕೆತ್ತನೆಯ ತರಬೇತಿಯನ್ನು ನೀಡಿ, ಸದರಿಯವರನ್ನು ಮಾಸ್ಟರ್ ಕ್ರಾಫ್ಟ್‌ಮನ್ ಆಗಿ ಮಾಡಿಸಿ, ಮುಂದೆ ಸದರಿಯವರೇ ಸ್ವಉದ್ಯೋಗಿಗಳಾಗಲು ನಿಗಮವು ತರಬೇತಿ ನೀಡಲಾಗುತ್ತದೆ.

4) ಕೇಂದ್ರ ಸರ್ಕಾರದ ವತಿಯಿಂದ ವಿವಿಧ ಡಿ.ಸಿ.(ಹೆಚ್) ಯೋಜನೆಯಾದ - ರಾಷ್ಟ್ರೀಯ ಕರಕುಶಲ ಅಭಿವೃದ್ಧಿ ಯೋಜನೆ (NHDP) ಗೆ ಅನುದಾನವನ್ನು ನೊಂದಾಯಿತ ಕರಕುಶಲಕರ್ಮಿಗಳ ಅಭಿವೃದ್ಧಿಗಾಗಿ ನೀಡಲಾಗುತ್ತಿದೆ.

5) ಅಂಬೇಡ್ಕರ್ ಹಸ್ತ ವಿಕಾಸ ಯೋಜನೆ (AHVY) ಯಡಿಯಲ್ಲಿ ಅನುದಾನವನ್ನು ನೊಂದಾಯಿತ ಕರಕುಶಲಕರ್ಮಿಗಳ ಅಭಿವೃದ್ಧಿಗಾಗಿ ನೀಡಲಾಗುತ್ತಿದೆ.

6) ಕಳೆದ 3 ವರ್ಷಗಳಿಂದ ಸರ್ಕಾರವು ನೀಡಿರುವ ಅನುದಾನ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ | ವರ್ಷ | ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 01 | 2019-20 | 115.00 |
| 02 | 2020-21 | 100.00 |
| 03 | 2021-22 | 150.00 |
| ಒಟ್ಟು | | **365.00** |

| | | |
|---|---|---|
| | | 7) ಕಳೆದ 03 ವರ್ಷಗಳಲ್ಲಿ ನಿಗಮವು ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ನವ ದೆಹಲಿ. ಕೇಂದ್ರ ಸರ್ಕಾರ ಐ.ಡಿ.ಪಿ.ಹೆಚ್ ಯೋಜನೆಯಡಿಯಲ್ಲಿ ನಿಗಮದ ನೊಂದಾಯಿತ ಕರಕುಶಲಕರ್ಮಿಗಳಿಗೆ 430 ನೂತನ ವಿವಿಧ ಉಪಕರಣಗಳನ್ನು ಹಂಚಿಕೆ ಮಾಡಲಾಗಿದೆ.<br>8) ಕಳೆದ 03 ವರ್ಷಗಳಲ್ಲಿ ಅಭಿವೃದ್ಧಿ ಆಯುಕ್ತರು (ಕರಕುಶಲ), ಜವಳಿ ಮಂತ್ರಾಲಯ, ನವ ದೆಹಲಿ, ಕೇಂದ್ರ ಸರ್ಕಾರ ರವರ ಯೋಜನೆಯಡಿಯಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತವು. ಹಮ್ಮಿಕೊಂಡ ವಸ್ತು ಪ್ರದರ್ಶನ ಗಾಂಧಿ ಶಿಲ್ಪ ಬಜಾರ್ / ಮೇಳಗಳಲ್ಲಿ 365 ಕರಕುಶಲಕರ್ಮಿಗಳು ಭಾಗವಹಿಸಿರುತ್ತಾರೆ. |
| ಈ) | ರಾಜ್ಯದಲ್ಲಿನ ರಾಮನಗರ, ಶಿವಮೊಗ್ಗ, ಕೊಪ್ಪಳ ಮುಂತಾದ ಜಿಲ್ಲೆಗಳಲ್ಲಿ ಗುಡಿ ಕೈಗಾರಿಕೆಗಳನ್ನು ರೂಪಿಸಲು ರಾಜ್ಯ ಸರ್ಕಾರ ರೂಪಿಸಿರುವ ಕೈಗಾರಿಕಾ ನೀತಿಯೇನು ಮತ್ತು ಈ ನೀತಿ ಆಧರಿಸಿ, ರೂಪಿಸಿರುವ ಕಾರ್ಯಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿನ ಎಲ್ಲಾ ಜಿಲ್ಲೆಗಳನ್ನೊಳಗೊಂಡಂತೆ ಕೈಗಾರಿಕಾ ಅಭಿವೃದ್ಧಿಗಾಗಿ ಕೈಗಾರಿಕಾ ನೀತಿ - 2020-25 ನ್ನು ರೂಪಿಸಿದ್ದು, ಗುಡಿ ಕೈಗಾರಿಕೆಗಳನ್ನು ಒಳಗೊಂಡಂತೆ ಸೂಕ್ಷ್ಮ ಕೈಗಾರಿಕೆಗಳಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿದೆ.<br>1. ಬಂಡವಾಳ ಹೂಡಿಕೆ ಸಹಾಯಧನ<br>2. ಐ.ಎಸ್.ಓ ಗುಣಮಟ್ಟ ಪ್ರಮಾಣಪತ್ರ<br>3. ವಿದ್ಯುತ್ ಸಹಾಯಧನ<br>4. ಶೇ.4ರಷ್ಟು ಬಡ್ಡಿ ದರದಲ್ಲಿ ಅವಧಿ ಸಾಲ.<br>5. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ.10 ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ).<br>6. ಕರಕುಶಲ ಸಂಘಟನೆಗಳಿಗೆ ಕರಕುಶಲ ಕಾಂಪ್ಲೆಕ್ಸ್‌ಗಳಿಗೆ ಸಮೂಹ ಮೊದಲಾದವುಗಳಿಗೆ ಯಂತ್ರೋಪರಣಗಳು, ಬಿಡಿ ಭಾಗಗಳಿಗೆ ಶೇ.75ರಷ್ಟು ಅನುದಾನ |
| ಉ) | ಮೈಸೂರು-ಬೆಂಗಳೂರು ನಡುವೆ ನಿರ್ಮಿಸಿರುವ ಬೆಂಗಳೂರು -ಮೈಸೂರು ಎಕ್ಸ್‌ಪ್ರೆಸ್ ವೇ ಯಿಂದ ಚನ್ನಪಟ್ಟಣ ಬೊಂಬೆಗಳ ತಯಾರಿಕೆ ಮತ್ತು ಮಾರಾಟದ ಮೇಲೆ ಭಾರಿ ಪರಿಣಾಮ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು) | ಇಲ್ಲ. |

ಸಿಐ 40 ಸಿಎಸ್‌ಸಿ 2023

(ಎನ್. ನಾಗರಾಜು (ಎಂ.ಟಿ.ಬಿ.))
ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು